doc-539
T-P-2

ಗೋರಕ್ಷಣಾ
GORAKSHANA

9 ನೇ ವರ್ಷ — 1958 ನೇ ನವೆಂಬರ್ ತಾ || 29 || Nov 58

Protect the Cow ಗೋಸಂರಕ್ಷಣೆ ಮಾಡಿ

Advertise in Goraksana anp help the pious cause

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇಸಾರಿ) ಮಾತ್ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಸಪ್ತಾಹಬಹುಮಾನ ವಿತರಣೆ

ಮೈಸೂರು 24 — 1958 ರ ಮೈಸೂರು ಗೋಸಂವರ್ಧನ ಸಪ್ತಾಹ ಸಮಿತಿ ಆಶ್ರಯದಲ್ಲಿ ಗೋ ಪ್ರದರ್ಶನ ಬಹುಮಾನ ವಿತರಣೆ ಸಮಾರಂಭ ನಿನ್ನೆ ಸಾಯಂಕಾಲ ಪಶುವೈದ್ಯ ಶಾಲೆಯ ಆವರಣದಲ್ಲಿ ಪುರಸಭಾಧ್ಯಕ್ಷ ಶ್ರೀ ಬಿ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಟಿ. ಶಾಂತರಾಜಪ್ಪ ಸಮಾರಂಭವನ್ನು ಉದ್ಘಾಟಿಸಿದರು. ಅಧ್ಯಕ್ಷರು ಮಾಡಿದ ಭಾಷಣದಲ್ಲಿ, ಗೋಸಂಪತ್ತು ಅಮೂಲ್ಯವಾದ ಸಂಪತ್ತಾಗಿದ್ದು ಅದರ ಸುರಕ್ಷತೆಗಾಗಿ ಕೇಂದ್ರ ಹಾಗೂ ರಾಜ್ಯಸರಕಾರಗಳು ಸಹಾಯಮಾಡುತ್ತಿವೆ, ಜನರು ಸಹಕರಿಸಬೇಕು ಗೋಸಂವರ್ಧನೆಗೆ ಶ್ರಮಿಸಬೇಕು, ಎಂದು ನುಡಿದರು.

ಗೋಸಂಪತ್ತು ಹೆಚ್ಚಬೇಕು

ನಮ್ಮ ನಾಡಿನಲ್ಲಿ ಗೋಸಂಪತ್ತಿಗೆ ಪೂರ್ವಕಾಲದಿಂದಲೂ ಕಲ್ಪಿಸಿದ ಮಹತ್ವದ ಅಂಶವನ್ನು ಅರಿತುಕೊಂಡು, ಈ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು : ಒಕ್ಕಲತನ ಪ್ರಧಾನವಾದ ನಮ್ಮ ದೇಶದಲ್ಲಿ ಇದರ ಸುಧಾರಣೆಯ ಕಡೆಗೆ ವಿಶೇಷ ಗಮನ ಕೊಡಬೇಕಾದುದು ಅವಶ್ಯವಿದೆ : ಒಕ್ಕಲುತನದ ಅಭಿವೃದ್ಧಿಗೆ ಗೋಸಂಪತ್ತನ್ನು ಹೆಚ್ಚಿಸುವುದೂ ಅಗತ್ಯವಿದೆ— ಎಂದು ಕೆಲವು ದಿನಗಳ ಹಿಂದೆ ಧಾರವಾಡದಲ್ಲಿ ಹರಿಯಾಣಾ ದನಗಳ ಸಹಕಾರ ಸಂಗೋಪನ ಸಂಘದ ಉದ್ಘಾಟನೆ ನೆರವೇರಿಸುತ್ತಾ, ಮೈಸೂರು ಸರಕಾರದ ಗ್ರಾಮಾಂತರ ಕೈಗಾರಿಕೆಗಳ ಉಪ-ಮಂತ್ರಿ ಶ್ರೀಮತಿ ಲೀಲಾವತಿ ಮಾಗಡಿಯವರು ಹೇಳಿದರು.

ಜಲಂಧರ 13 — ಅಖಿಲ ಭಾರತ ಗೋಹತ್ಯ ನಿರೋಧ ಸಮಿತಿ ಕಾರ್ಯದರ್ಶಿ ಶ್ರೀ ಖಾದೇವ ಸಹಾಯರು ಇಲ್ಲಿ ಹೇಳಿಕೆಯಿತ್ತು, ಭಾರತಾದ್ಯಂತ ಗೋವಧೆ ನಿಲ್ಲಬೇಕೆಂದರು

ಪೌರಸಭೆ ಗೋಸಪ್ತಾಹವನು ಏರ್ಪಡಿಸಬೇಕು

ಮೈಸೂರು ಪೌರಸಭೆಯ ಅಧಿವೇಶನದಲ್ಲಿ ಡಾ|| ಬಿ ಜಿ ದಾಸ್‌ರವರು ನಿನ್ನೆ ಮಾತನಾಡುತ್ತಾ, ಮೈಸೂರು ಪೌರಸಭೆಯ ಆಶ್ರಯದಲ್ಲಿ ಪ್ರತಿ ವರ್ಷವೂ ಗೋಸಂವರ್ಧನ ಸಪ್ತಾಹ ನಡೆಯಬೇಕೆಂದು ತಿಳಿಸಿದರು. ಪೌರಸಭೆಯ ಅಧ್ಯಕ್ಷರಾದ ಶ್ರೀ ಬಿ. ನಾರಾಯಣ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಗೋವಧೆ ನಿಶೇಧವಾಗಲಿ

ಗೋವಧೆ ಸಂಪೂರ್ಣ ನಿಶೇಧವಾಗುವ ವರೆಗೆ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುವದಿಲ್ಲ. ಏಕೆಂದರೆ ನಿಶೇಧ ಆಗುವ ವರೆಗೆ ಸಣ್ಣ ಮಟ್ಟು ಕರೆವ ಗೋವುಗಳನ್ನು ರಕ್ಷಣೆ ಮಾಡಲಾಗುವದೆಂಬುದು ಆಶ್ಚರ್ಯವೇ ಸರಿ. ಉತ್ಪಾದಿಸುವ ಗೋವುಗಳಿಂದ ಶೇಕಡ 150ನಷ್ಟೆ ಕಟುಕರಿಗೆ ದೊರೆಯುವದು ಮುದಿದನಗಳ ಕೊಲೆಯಿಂದ ಕಟುಕರಿಗೆ ಸಿಗುವ ಲಾಭ ಶೇಕಡ 15 ಆರ್ಥಿಕಾಭಿವೃದ್ಧಿಗಾಗಿ ಗೋವಧೆ ನಿಶೇಧವಾಗಬೇಕೆಂದು ಸರ್ವ ನಿಷ್ಪಕ್ಷಪಾತ ಸಮಿತಿಗಳು ತಿಳಿಸಿವೆ.

ಪ್ರಾಣಿಹಿಂಸೆಗೆ ಜುಲ್ಮಾನೆ

ಬೊಂಬ್ಬಾಯಿ ನಗರ ನ್ಯಾಯಾಧೀಶರು ಪ್ರಾಣಿಗೆ ಹಿಂಸೆಕೊಡಹತ್ತಿದ್ದ ಅಪಾದನೆಗಾಗಿ ಒಬ್ಬ ಮಾಂತ್ರಿಕನಿಗೆ ರೂ 20 ಜುಲ್ಮಾನೆ ವಿಧಿಸಿದರು – ಸಿಂಗಾಜಖಾರ್ ಎಂಬ ಆ ಮಾಂತ್ರಿಕನು ತನ್ನ ಬಳಿ ಇದ್ದ ಕತ್ತೆಕಿರುಬನನ್ನು ಪಂಜರದಲ್ಲಿಟ್ಟು ಕ್ರಾರ್ಯದಿಂದ ನಡೆದುಕೊಳ್ಳುತ್ತಿದ್ದನು; ಮೊಖದ್ದಮೆ ಇತ್ಯರ್ಥವಾದ ನಂತರ ಮಾಂತ್ರಿಕನು ಆ ಕತ್ತೆಕಿರುಬನನ್ನು ವಿಕ್ಟೋರಿಯಾ ಗಾರ್ಡನ್ ಪ್ರಾಣಿಸಂಗ್ರಹಾಲಯಕ್ಕೆ ಕೊಟ್ಟುಬಿಟ್ಟನು.

ಗೌರವ ಪ್ರಚಾರಕರು

ನಾನು ತಮ್ಮ ಗೋರಕ್ಷಣ ಪತ್ರಿಕೆಗೆ ಗೌರವನೀಯ ಪ್ರಚಾರಕನಾಗಿ ನನ್ನ ಜೀವಿತವಿರುವ ವರಿವಿಗೆ ಸೇವೆ ಸಲ್ಲಿಸುತ್ತೇನೆಂತ ಅತ್ಯಸಾಕ್ಷಿಯಾಗಿ ಒಪ್ಪಿರುತ್ತೇನೆಂದು ಅಖಿಲ ಭಾರತ ಗೋರಕ್ಷಣ ಮಂಡಲಿ, ದಕ್ಷಿಣ ಭಾರತ ಶಾಖೆಯ ವ್ಯವಸ್ಥಾಪಕರಾದ ಡಾ|| ಪಿ. ಎಸ್. ನಾರಾಯಣಶಾಯಿರು ತಿಳಿಸಿರುವುದು ಸ್ತುತ್ಯಾರ್ಹ ಇದೇ ರೀತಿ ಗೋಸೇವಕರು ಹೆಚ್ಚು ಹೆಚ್ಚು ಸಹಕರಿಸಬೇಕೆಂದು ಕೋರುತ್ತೇವೆ

ನಿಮಗೆ ಗೊತ್ತೆ ?

ದೇಶದ ಗೋಸಂಪತ್ತನ್ನು ಹೆಚ್ಚಿಸುವ ಸಲುವಾಗಿ ಗ್ರಾಮಾಂತರ ವ್ಯಾಪ್ತಿ ಮೂಲ ಕಾರ್ಯಕ್ರಮಗಳು ಕೆಲವನ್ನು ಸರಕಾರ ಹಾಕಿಕೊಂಡಿದೆ.

ತರಕಟ್ಟಾಲು ಹೋರಿಗಳನ್ನು ನಿರ್ವೀರ್ಯಗೊಳಿಸಿ ಅವುಗಳಿಂದ ಒಳ್ಳೆ ಹಸುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು, ಬೀಜದ ಹೋರಿಗಳ ಅಭಾವ ವಿರುವ ಕಡೆಗಳಲ್ಲಿ ಕೃತಕ ವಿಧಾನಗಳಿಂದ ಉತ್ತಮ ರಾಸುಗಳಿಗೆ ಗರ್ಭದಾನ ನೀಡುವ ಕೇಂದ್ರಗಳನ್ನು ಸ್ಥಾಪಿಸುವದು. ಒಳ್ಳೆಯ ಜಾತಿಗಳ ಕರುಗಳನ್ನು ಬೆಳೆಸುವದು ದನಗಳಿಗೆ ಬೇಕಾಗುವ ಒಳ್ಳೆಮೇವು ದೊರಕಲು ವ್ಯವಸ್ಥೆ ಮಾಡಿ ಅದನ್ನು ಒದಗಿಸುವದು ಮತ್ತು ಪಶುವಾಲನೆಗೆ ಸಂಬಂಧಿಸಿದ ವಸ್ತುಗಳ ಮಾರಾಟಕ್ಕೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವದು ಇತ್ಯಾದಿ ಹಲವು ಕಾರ್ಯಕ್ರಮಗಳು ಈ ಯೋಜನೆಯಲ್ಲಿ ಮುಖ್ಯವಾಗಿವೆ.

ಗೋವಧೆ ನಿರೋಧ ಅತಗತ

ಶಿ ಶಿ

ಮೈಸೂರು 24— ಗೋಪೂಜಕ ದೇಶವಾದ ಭಾರತದಲ್ಲಿ ಗೋವು ಶ್ರದ್ಧಾಸ್ಥಾನವಾಗಿದೆ : ಗೋವಿನ ಹತ್ಯೆಯನ್ನು ಜಾರಿಯಲ್ಲಿಡುವುದೆಂದರೆ ರಾಷ್ಟ್ರದ ಶ್ರದ್ಧಾಸ್ಥಾನವನ್ನೇ ಭಗ್ನಗೊಳಿಸಿದಂತೆ; ಎಂದು ನಿನ್ನೆ ಟೌನ್‌ಹಾಲ್ ಮೈದಾನದಲ್ಲಿ ಗೋಹತ್ಯ ನಿರೋಧ ಸಮಿತಿ ಆಶ್ರಯದಲ್ಲಿ ಆರ್ ಎಸ್ ಎಸ್ ಬೆಂಗಳೂರು ವಿಭಾಗದ ಪ್ರಚಾರಕ ಶ್ರೀ ಮಾಧ್ವರಾವ್ ಮಾಡಿದ ಭಾಷಣದಲ್ಲಿ ತಿಳಿಸಿದರು : ಗೋವಿನ ಹತ್ಯವನ್ನು ಜಾರಿಯಲ್ಲಿಟ್ಟು ಗೋಸಂವರ್ಧನೆಯ ಪ್ರದರ್ಶನ ಮಾಡುವುದು ಜನತೆಯ ಕಣ್ಣಿಗೆ ಮಣ್ಣೆರಚುವ ವಂಚನೆಯಾಗಿದೆ, ಗೋಹತ್ಯ ನಿರೋಧ ಅತ್ಯಗತ್ಯ ಎಂದೂ ಹೇಳಿದರು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿ 1258 ಗ್ರಾಮ ಯೋಜನಾ ಕೇಂದ್ರಗಳು ಮತ್ತು 245 ಕೃತಕ ಗರ್ಭದಾನ ಕೇಂದ್ರಗಳನ್ನು ಸ್ಥಾಪಿಸುವೆದೇ ಆಗಿದೆ.

ಗೋಸದನಗಳ ಸ್ಥಾಪನೆಯ ಯೋಜನೆಯ ಗುರಿ ಅನುಪಯುಕ್ತ ಹಾಗೂ ರೋಗಗ್ರಸ್ತ ರಾಸುಗಳನ್ನು ಪ್ರತ್ಯೇಕಿಸಿ ಅವುಗಳನ್ನು ದೂರವಿಡುವದೇ ಆಗಿದೆ ಎರಡನೆ ಪಂಚವಾರ್ಷಿಕ ಯೋಜನೆ ಪ್ರಕಾರ ಸುಮಾರು 30 ಸಾವಿರ ರಾಸುಗಳಿಗೆ ಆಶ್ರಯ ನೀಡುವ 60 ಗೋಸದನಗಳು ಸ್ಥಾಪಿತವಾಗುತ್ತವೆ

ದೇಶದಲ್ಲಿ ಖಾಸಗಿಯಾಗಿ ಕೆಲಸ ಮಾಡುತ್ತಿರುವ ಕೆಲವು ಗೋಶಾಲೆಗಳನ್ನಾರಿಸಿಕೊಂಡು ಅವುಗಳ ಅಭಿವೃದ್ಧಿಗೆ ಎಲ್ಲ ರೀತಿಯ ಸಹಾಯವನ್ನೂ ಸರ್ಕಾರ ನೀಡುತ್ತಿದೆ.

ಪಶು ಸಂಗೋಪನೆ

ಮೈಸೂರು ರಾಜ್ಯದಲ್ಲಿ ಪಶುಪ್ರಾಣಿಗಳ ಸಂಗೋಪನೆಯು ಕಾರ್ಯಕ್ರಮದ ಮೇರೆಗೆ ಅನೇಕ ರೋಗಗಳ ಸಂಬಂಧದಲ್ಲಿ 25000 ಪಶುಗಳಿಗೂ ಹಾಗೂ 18000 ಸಾಕು ಪಕ್ಷಿಗಳಿಗೂ ಚಿಕಿತ್ಸೆ ಮಾಡಲಾಯಿತು ; ಸಹಾಯ ದಾನಗಳ ಆಧಾರದ ಮೇಲೆ 140 ರಷ್ಟು ಜಾತೀಯ ಶಕ್ತಿ ಪಕ್ಷಿಗಳನ್ನು ಪೊರೈಸಲಾಯಿತು.

— ಮೈಸೂರು ವಾಣಿ

ಪ್ರಾಣಿಹಿಂಸೆ ತಡಗಟ್ಟಲು ಶಾಸನ

ನವದೆಹಲಿ 18— ಪ್ರಾಣಿಹಿಂಸೆ ತಡೆಗಟ್ಟಲು ಕಾನೂನು ಕ್ಷಿಪ್ರದಲ್ಲೇ ತರಲಾಗುವುದೆಂದು ಭಾರತ ವ್ಯವಸಾಯ ಮಂತ್ರಿ ಶ್ರೀ ಕೃಷ್ಣಪ್ಪನವರು ರಾಜಸಿ ಸಭೆಯಲ್ಲಿ ತಿಳಿಸಿದರು.

ಹೆಚ್ಚು ಹಾಲು ಕೊಡುವ ಹಸು

ಭಾರತದ ಯೆತೀಕವೊಲಾ ಜಿಲ್ಲಾ ವಾಹೇ ತಾಲ್ಲೂಕಿನ ಉಕಾಗಿ ಗ್ರಾಮದ ಅರ್ಜುನ ಖಾಡೆಯವರು ಫಾರಂಯೂತ್ ಎಕ್ಸ್‌ಜೇಂಜಿನಂತೆ ಅಮೇರಿಕಾ ಡುಫೆಕ್ ಫಾರಂನಲ್ಲಿ ವಾಸಿಸುತ್ತಾ ಕೆಲಸ ಮಾಡುತ್ತಿರುವರು — ಅವರು ಕರೆಯುತ್ತಿರುವ ಒಂದು ಹಸು ದಿನಕ್ಕೆ 103 ಪೌಂಡು ಹಾಲನ್ನು ಕೊಡುತ್ತಿರುವುದೆಂದು ಅಮೇರಿಕ ರಿಪೋರ್ಟರಿನಲ್ಲಿ ಪ್ರಕಟಿಸಲಾಗಿದೆ.

ಪಮ್ಮೇಳನ

ಬೆಂಗಳೂರು 17 — ಕೇಂದ್ರ ಆಹಾರ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ನಿನ್ನೆ ಹೇಳಿಕೆಯಿತ್ತು ಮುಂದಿನ ವರ್ಷ ಫೆಬ್ರವರಿ ತಾ|| 15 ರಿಂದ ಬೆಂಗಳೂರಿನಲ್ಲಿ ಅಖಿಲಭಾರತ ಪಶು ಮತ್ತು ಕೋಳಿ ಸಾಕಾಣಿಕೆ ಸಮ್ಮೇಳನ ಮತ್ತು ಗೋಪಾಲಕರ ಸಮ್ಮೇಳನ ಸಮಾವೇಶವಾಗುವುದಾಗಿ ತಿಳಿಸಿದರು.

ಗೋವಧೆ ನಿಲ್ಲಲಿ

ಶಿವಮೊಗ್ಗ — ಗೋಸಂವರ್ಧನ ದಿನಾಚರಣೆ ಗೋಸಂವರ್ಧನ ಸಂಘದಾಶ್ರಯದಲ್ಲಿ ಜಿಲ್ಲಾಧಿಕಾರಿಯವರಾದ ಶ್ರೀ ಬಿ. ಭೂಣಯ್ಯನವರ ಅಧ್ಯಕ್ಷತೆಯಲ್ಲಿ ಈ ತಿಂಗಳು 17 ನೇ ತಾ|| ನೆಂವೇನಿತು ಗೋವಧೆ ನಿಲ್ಲಿಸುವಂತೆ ಮನವಿ ಮಾಡಲಾಯಿತು.

ಗೋಹತ್ಯೆ
ಘೋರ ಕಳಂಕಪ್ರಾಯವಾಗಿದೆ

ಮೈಸೂರು 17— ಈ ಗೋಪೂಜಕ ನಾಡಿನಲ್ಲಿ ಇಂದಿನ ಗೋ ವಂಶದ ಘೋರ ಹತ್ಯ ನಡೆದಿರುವುದು ರಾಷ್ಟ್ರದ ಸ್ವಾಭಿಮಾನಕ್ಕೆ ಕಳಂಕಪ್ರಾಯವಾಗಿದೆ : ಆರ್ಥಿಕ ದೃಷ್ಟಿಯಿಂದ ನೋಡಿದರೂ ನಮ್ಮಾ ಕೃಷಿ ಪ್ರಧಾನ ಭೂಮಿಯಲ್ಲಿ ಗೋವಂಶ ಸಂರಕ್ಷಣೆ ಅಸಮಾನ್ಯ ಮಹತ್ವದ್ದಾಗಿದೆ ; ಆದ್ದರಿಂದ ಗೋಹತ್ಯ ನಿರೋಧದ ಸಮಿತಿಯ ಕಾರ್ಯಕರ್ತರಿಗೆ ಸಹಕಾರ ನೀಡಬೇಕೆಂದು ಸಮಿತಿಯ ಅಧ್ಯಕ್ಷರಾದ ಸುತ್ತೂರು ಸಂಸ್ಥಾನ ವೀರ ಸಿಂಹಾಸನಾಧೀಶ್ವರ ಜಗದ್ಗುರು ಪಟ್ಟದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಹೇಳಿಕೆ ಹೊರಡಿಸಿದ್ದಾರೆ.

ಗೋವಧೆ ನಿಲ್ಲಲಿ

ಚನ್ನಪಟ್ಟಣದಲ್ಲಿ ಈ ತಿಂಗಳು 18 ನೇ ತಾ|| ಒಸ್ ನಿಲ್ದಾಣದಲ್ಲಿ ಗೋವಧೆ ನಿರೋಧ ಸಮಿತಿ ಆಶ್ರಯದಲ್ಲಿ ಬಹಿರಂಗ ಸಭೆ ನಡೆದು ಗೋವಧೆ ನಿರೋಧ ಶಾಸನವನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸಿತು.

ಉದ್ಭಿಜ ಜನ್ಮವು ಬರಲು
ಕಾರಣವೇನು ?

ಉದ್ಭಿಜಗಳೆಂದರೆ ಸ್ಥಾವರಗಳಾದ ವೃಕ್ಷಗಳು ; ಹೆಚ್ಚು ಪಾಪಕಾರ್ಯಗಳನ್ನು ಮಾಡುವವರು ಈ ಜನ್ಮವನ್ನು ಪಡೆಯುವರೆಂದು ಉಪನಿಷತ್ತುಗಳು ಹೇಳುತ್ತವೆ ; ಯಜ್ಞಯಾಗಾದಿಗಳಲ್ಲಿ ಪಶುವನ್ನು ಕೊಲ್ಲುವಂಥವರಿಗೂ, ಕೊಲ್ಲಿಸುವಂಥವರಿಗೂ, ಆ ಪಾಪ ಕಾರ್ಯಕ್ಕೆ ಸಹಾಯಮಾಡುವ ಮೂಲಕ ಅನುಮೋದಿಸುವಂಥವರು ಸ್ಥಾವರ ಜನ್ಮವನ್ನು ಪಡೆಯುವರು , ಅಂದರೆ ವೃಕ್ಷಾದಿಗಳಾಗಿ ಹುಟ್ಟುವರು. ಈ ವಿಷಯದಲ್ಲಿ ಆಂಗ್ಲೇಯ ಭಾಷಾ ವ್ಯಾಖ್ಯಾನ ಹೀಗಿದೆ—

' Birth as a plant is the effect of very sinful acts ; for, there exists the cause of such a birth viz., killing of animals for sacrificial purposes ; so jeevas are actually born as plants '.

(ಓಂ)

ವುಡ್‌ಲಾಂಡ್ಸ್

ದಿಗ್ವಿಜಯ 8 ನೇ ವಾರ

ಮಧುಮತಿ

— ತಾರಾಗಣ —

ವೈಜಯಂತಿಮಾಲಾ, ದಿಲೀಪಕುಮಾರ್
ಜಾನಿವಾಕರ್, ಪ್ರಾಣ್, ತಿವಾರಿ

ಅಪೆರಾ—

26—11—58 ರಿಂದ

ಮನಮೋಹಕ ತಮಿಳು ಚಿತ್ರ

ಭೂಲೋಕರಂಭೆ

ಪಾತ್ರ— ಆರ್. ಗಣೇಶ್, ಅಂಜಲಿ ಶಂಗವೇಲು, ವೀರಪ್ಪ, ಇ. ವಿ. ಸರೋಜ
ರಾಜಾ ಸುಲೋಚನಾ, ನಂಬಿಯಾರ್

ಪ್ರತಿ ದಿನ 3 ಆಟಗಳು

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು



ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

SHAKTI SUDHA

A Superb Tonic

Edited, Printed & Published by Dharma Prachara Nirata M S Krishna Rao, at the Satyavadi Press Chamarajapuram, Mysore